ಯಾರೂ ವಾಸ ಇಲ್ಲ. ಎಸ್ಟೇಟಿನ ಹಿಂದೆ ಇರೋ ಕರಿಮಾಯಿ ಗುಡ್ಡದ್ದು ಏನೇನೋ ಕತೆಯಿದೆ ಸಾರ್. ಕೇಳಿದ್ರೆ ಯಾರೂ ಹೀಗೇಂತ ಸರಿಯಾಗಿ ಹೇಳೋದಿಲ್ಲ ಸಾರ್. ನೀವ್ಯಾಕೆ ಸಾರ್...?'

'ಅದು ಯಾಕೆ ನಿನಗೆ? ನೀ ಹೇಳಿದ ದಾರಿ ಸರಿ ಇದೆ ತಾನೆ? ಎಡಕ್ಕೆ ಬಲಕ್ಕೆ ಅಂತೆಲ್ಲ ಹೇಳಿ ಗೊಂದಲ ಮಾಡಿ ಬಿಟ್ಟಲ್ಲೊ.'

'ನೀನೂ ಬಂದು ಬಿಡು ದೀಪೂ' ಕಾರಿನೊಳಗಿನಿಂದ ಶೀಲಾ ಹೇಳಿದಳು.

'ನಾ ಬರ್ಲಾ ಸಾರ್?' ದೀಪೂ ಕೇಳಿದ. ಸೋಮಾರಿಕಟ್ಟೆಯ ಗುಂಪು ಕಿಸಕ್ಕೆಂದಿತು.

'ಹ್ಞೂಂ, ಬಾ' ಎಂದು ಹಿಂಬಾಗಿಲು ತೆರೆದು ಪ್ರೊ. ಭಾಸ್ಕರ್ ಅವನನ್ನೂ ಹತ್ತಿಸಿಕೊಂಡರು. ಕಾರು ಹೊರಟ ಕೂಡಲೆ ಆತ ಮಾತು ತೆಗೆದ. 'ಅಮ್ಮಾವ್ರೆ, ನಿಮ್ಗೆ ನೋಡಬೇಕಿತ್ತೋ ಏನೊ. ಕೇಳ್ಳಿಕ್ಕೇ ಮರ್ತ್ರೋಯ್ತು. ಆ ಗುಡ್ಡದ ಹೆಸರು ಗೊತ್ತಾ? ಕರಿಮಾಯಿ ಗುಡ್ಡಾಂತ' ಎಂದ. ಪ್ರಶ್ನೆಯನ್ನು ಆತನೇ ಕೇಳಿ ಉತ್ತರವನ್ನೂ ಆತನೇ ಹೇಳಿದಾಗ ಶೀಲಾಳಿಗೆ ನಗು ಬಂತು. ಗಂಡನ ಮುಖ ನೋಡಿದಳು. ಹತ್ತಾರು ನರೆತ ಮೀಸೆಗಳ ನಡುವೆ ಅವರೂ ಮುಗುಳ್ನಕ್ಕರು.

ಭಗವತಿ ಎಸ್ಟೇಟು, ಬಂಗಲೆ ಸುತ್ತಾಡಿಯಾಯಿತು. ಮೆಚ್ಚುಗೆಯೂ ಆಯಿತು. ಎಸ್ಟೇಟಿನ ಮಧ್ಯದ ಬಂಗಲೆ. ಹಳೆಯ ಕಾಲದ್ದಾದ್ದರಿಂದ ಕಿಟಿಕಿ ಬಾಗಿಲುಗಳ ಸಂದುಗೊಂದುಗಳಲ್ಲಿ ಗೆದ್ದಲು ಓಡಾಡಿದಂತಿತ್ತು. ನೆಲವನ್ನು ನಿತ್ಯ ಗುಡಿಸುವುದರಿಂದ ಕಸಕಡ್ಡಿಗಳಿಲ್ಲದೆ ಮಿನುಗುತ್ತಿತ್ತು. ಕಿಟಕಿ, ದಾರಂದ, ಅಟ್ಟಗಳನ್ನೆಲ್ಲ ಜಾಡಿಸಿ ಒಪ್ಪಗೊಳಿಸಿದರೆ ಹಳೆಯ ಸೌಂದರ್ಯ ಮತ್ತೆ ಸಂಭ್ರಮಿಸೀತು ಎಂದುಕೊಂಡಳು ಶೀಲಾ. ಬ್ರಿಟಿಷರ ಕಾಲದ ವಾಸ್ತುವಿನಿಂದ ಕೂಡಿದ ಪಳೆಯುಳಿಕೆಯನ್ನು ಪುನರಪಿ ಸೃಜಿಸುವ ಬಗ್ಗೆ ಭಾಸ್ಕರ್ ಕೂಡ ಉತ್ಸಾಹ ತೋರಿದರು. ತಗ್ಗಿನಿಂದ ಗುಡ್ಡವನ್ನು ಏರಿಬರುವ ರಸ್ತೆ, ಹಿಂಭಾಗಕ್ಕೆ ದೂರದಲ್ಲಿ ಕಾಣಿಸುವ ಕರಿಮಾಯಿ ಗುಡ್ಡ, ಎದುರುಗಡೆ ಪ್ರಕೃತಿಯ ವಿಹಂಗಮ ದೃಶ್ಯ. ಇಬ್ಬರೂ ಮನಸಾರೆ ಒಪ್ಪಿಕೊಂಡರು. ಮೇಲಾಗಿ ವೀರನಗರದ ಸಂಶೋಧನಾ ಕೇಂದ್ರಕ್ಕೆ ಅಲ್ಲಿಂದ ಕೇವಲ ಮೂರು ಕಿಲೋಮೀಟರ್ ದಾರಿ. ಮರಳಿ ಬರುತ್ತಾ ದೀಪೂವನ್ನು ಕೊಡವೂರಿನಲ್ಲಿ ಇಳಿಸಿದರು.

ಸೋಮಾರಿಕಟ್ಟೆಯ ಮಂದಿ ದೀಪೂವನ್ನು ಮುತ್ತುತ್ತಿದ್ದಂತೆಯೆ ಕಾರು ಹೊರಟಿತು. ಪ್ರೊ. ಭಾಸ್ಕರ್ ನೇರವಾಗಿ ಚಂದ್ರಪ್ಪನವರ ಮನೆಗೆ ಬಂದು ತಮ್ಮ ಒಪ್ಪಿಗೆ ಸೂಚಿಸಿದರು. ಅಮ್ಮನನ್ನೂ ಅಲ್ಲಿಗೆ ಕರೆದೊಯ್ಯುವ ಬಯಕೆ ಇಬ್ಬರದೂ. ಗಂಗಮ್ಮ ಮಾತ್ರ ಅದಕ್ಕೊಪ್ಪಲಿಲ್ಲ. ಏನೇ ಆದರೂ ಐವತ್ತು ವರ್ಷಗಳಿಂದ ಇದ್ದ ಮನೆ. ಅದರ ನೆಲಕ್ಕೂ ಅವರ ಪಾದಗಳಿಗೂ ಆಯಸ್ಕಾಂತಿಕ ಸಂಬಂಧ. ಸುತ್ತ ಅಮ್ಮನ ಉಸ್ತುವಾರಿಯಲ್ಲಿರುವ ಕಾಫಿ ತೋಟ. ಬಹುಕಾಲದಿಂದ ಅಲ್ಲೇ ದುಡಿಯುವ ನಾಲ್ಕಾರು ಆಳುಗಳು. ಬೇರ್ಪಡುವ ಪ್ರಶ್ನೆ ಉದ್ಭವಿಸುವುದೇ ಇಲ್ಲ. ಎರಡೂ ಮನೆಗಳು ಪರಸ್ಪರ ಬಹಳ ದೂರವೇನೂ ಅಲ್ಲದ್ದರಿಂದ ಡಾ. ಗಣೇಶ್ ಮಧ್ಯಸ್ಥಿಕೆ ವಹಿಸಿ ಗಂಗಮ್ಮನನ್ನು ಸಮಾಧಾನಪಡಿಸಿದರು.

ಪ್ಲಾಂಟರ್ ಸೋಮಣ್ಣನವರ ಜೊತೆಗಿನ ವ್ಯವಹಾರವನ್ನು ಕೆಲದಿನಗಳಲ್ಲೇ ಮುಗಿಸಿದ ಚಂದ್ರಪ್ಪನವರು ಭಗವತಿ ಎಸ್ಟೇಟಿನ ಕೀಲಿಕೈಯನ್ನು ಮಗಳ ಕೈಗಿತ್ತರು. ಪ್ರೊಫೆಸರ್ ಭಾಸ್ಕರ್ ಆಗಾಗ ಬಂದು ಅಮ್ಮನನ್ನು ನೋಡಿ ಹೋಗುವುದಾಗಿಯೂ ಶೀಲಾ ನಿತ್ಯದ ಮನೆಗೆಲಸ ಮುಗಿಸಿ ಬಿಡುವಿದ್ದಾಗಲೆಲ್ಲ ಬಂದು ಅತ್ತೆಯ ಜೊತೆ ಇರುವುದಾಗಿಯೂ ತಿಳಿಸಿ ಭಗವತಿ ಎಸ್ಟೇಟಿಗೆ ಹೊರಡುವ ಸಿದ್ಧತೆ ಮಾಡತೊಡಗಿದರು.

8

ಕೊಡವೂರನ್ನು ದಾಟಿ ಮೂರು ಕಿಲೋಮೀಟರ್ ದೂರದಲ್ಲಿ ಸಿಗುವ ವೀರನಗರವೇ ಅಲ್ಲಿಗೆಲ್ಲ ದೊಡ್ಡಪೇಟೆ. ಕಾಫಿ ಸಂಶೋಧನಾ ಕೇಂದ್ರ ನಿಮಿತ್ತವಾಗಿ ವೀರನಗರಕ್ಕೆ ಹೆಸರು. ಕೆಲವಾರು ಸಂಶೋಧಕರು, ವಿಜ್ಞಾನಿಗಳು ದೇಶದ ವಿವಿಧ ಭಾಗಗಳಿಂದ ಅಲ್ಲಿಗೆ ಬಂದು ಹೋಗುತ್ತಿದ್ದರು. ಪ್ರೊ. ಭಾಸ್ಕರ್‌ರ ಪ್ರವೇಶ ಆದಾಗಿನಿಂದ ಸಂಶೋಧನಾ ಕೇಂದ್ರಕ್ಕೆ ವಿಶೇಷ ಆಯಾಮ ಒದಗಿತ್ತು. ಸರಕಾರದ ಆಸಕ್ತಿಯನ್ನೂ ತನ್ನೆಡೆಗೆ ಸೆಳೆದುಕೊಳ್ಳುವುದು ಸಂಶೋಧನಾ ಕೇಂದ್ರಕ್ಕೆ ಸಾಧ್ಯವಾಗಿತ್ತು. ಪ್ರೊ. ಭಾಸ್ಕರ್‌ರ ಸಂಶೋಧನಾ ವೈಖರಿಯೇ ವಿಶಿಷ್ಟವಾದುದು. ಕೈಯಲ್ಲೊಂದು ಉರಿಯುವ ಸಿಗರೇಟು ಹಿಡಿದು ಲ್ಯಾಬ್‌ನ ಮೆಟ್ಟಲ ತುದಿಯಲ್ಲಿ ಕೊನೆಯ ಪಫ್ ಸೇದಿ ತನಗಾಗಿಯೇ ಸಿದ್ಧಪಡಿಸಲಾದ ಎತ್ತರದ ಆ್ಯಶ್ ಟ್ರೇಗೆ ಬಡ್ಡನ್ನು ಸೇರಿಸಿ ಒಳನುಗ್ಗಿದರೆಂದರೆ ಇನ್ನೊಂದು ಹೊಗೆ ನೆನಪಾಗುವ ತನಕ ಮಾತಿಲ್ಲ, ಕತೆಯಿಲ್ಲ. ಮಧ್ಯಾಹ್ನದ ಊಟವಾಗಲೀ ವಿಶ್ರಾಂತಿಯಾಗಲೀ ಮುಖ್ಯವಲ್ಲ. ಸಂಜೆ ಲ್ಯಾಬ್‌ನಿಂದ ಹೊರಬಂದರೆ ಹೊಸ ಪ್ರಯೋಗಶಾಲೆಯ ಕಟ್ಟಡ ಕೆಲಸದ ಸುತ್ತ ರಾತ್ರಿ ತನಕ ತಿರುಗಾಟ. ಸಮಯಕ್ಕೆ ಮನೆ ಸೇರುವುದೂ ತಪ್ಪಿಹೋಗುತ್ತಿತ್ತು. ಮನೆಯಲ್ಲಾದರೂ ಶೀಲಾಳಿಗೆ ಚಿಂತೆ ಕಾಡತೊಡಗಿತ್ತು. ಅಷ್ಟು ದೊಡ್ಡ ಬಂಗಲೆಯಲ್ಲಿ ರಾತ್ರಿ ಪ್ರೊಫೆಸರ್ ಬರುವವರೆಗೆ ತಾನೊಬ್ಬಳೇ ಇರುವುದು ಕಷ್ಟವಾಗುತ್ತಿತ್ತು. ಮೊದಮೊದಲು ಕತ್ತಲೆಗೆ ಮುಂಚೆ ಮನೆ ಸೇರುತ್ತಿದ್ದ ಪ್ರೊ. ಭಾಸ್ಕರ್‌ರಿಗೆ ಕಾಲಕ್ರಮೇಣ ಹೊತ್ತಿಲ್ಲ, ಗೊತ್ತಿಲ್ಲ. ಆಕೆ ಗಂಡನಿಗೆ ಆಗಾಗ್ಗೆ ಹೇಳುತ್ತಿದ್ದಳು. ಅವರಿಗೂ ಅದು ಗೊತ್ತಿತ್ತು. ಕೈಗೆತ್ತಿಕೊಂಡ ಕೆಲಸವನ್ನು ಮಧ್ಯದಲ್ಲಿ ಬಿಟ್ಟು ಬರುವುದು ಹೇಗೆ? ತೋಟದ ಕೆಲಸದ ಮಂದಿಯೆಲ್ಲ ಸಾಯಂಕಾಲ ತಮ್ಮ ಬಿಡಾರಕ್ಕೆ ತೆರಳುವವರು. ಮನೆ ಕೆಲಸಕ್ಕೇಂತ ಯಾರನ್ನು ನಿಯಮಿಸಿರಲಿಲ್ಲ. ಜಾನಮ್ಮನನ್ನಾದರೂ ಕರೆತರೋಣವೆಂದರೆ ಅಪ್ಪನ ಊಟಕ್ಕೆ ಕಲ್ಲು ಹಾಕಿದಂತೆ. ಅಡುಗೆ, ಮನೆಗೆಲಸಗಳನ್ನು ಜಾನಮ್ಮ ಕಲಿಸಿಕೊಟ್ಟಿದ್ದಳು, ಮನೆ ನಡೆಸುವುದಕ್ಕೆ ಬೇಕಾದಷ್ಟು. ಹೊರಗಿನ ಕೆಲಸವನ್ನು ತೋಟದ ಕೆಲಸದಾಕೆಯೊಬ್ಬಳು ಬಂದು ಮಾಡಿ ಹೋಗುತ್ತಿದ್ದಳು. ಔಟ್‌ಹೌಸ್‌ನಲ್ಲಾದರೂ ಒಬ್ಬರನ್ನು ಇರಿಸೋಣವೆಂದರೆ ಅದನ್ನು ಕಾಫಿ ತೋಟದ ಗೋಡೌನ್ ಮಾಡಿಬಿಟ್ಟಿದ್ದರು.

ದಿನಗಳು ಹೀಗೆಯೇ ಉರುಳುತ್ತಿದ್ದವು. ರಜಾ ದಿನಗಳಲ್ಲೂ ಪ್ರೊ. ಭಾಸ್ಕರ್ ಲ್ಯಾಬ್‌ನಲ್ಲಿ ಕುಳಿತು ಕೊಳ್ಳುವುದುಂಟು. ಅಪರೂಪಕ್ಕೆ ಬದಲಾವಣೆ ಬೇಕು ಅನ್ನಿಸಿದಾಗ ಶೀಲಾಳನ್ನು ಕರೆದುಕೊಂಡು ಅಮ್ಮನನ್ನು ನೋಡುವುದಕ್ಕೋ ಮಾವನನ್ನು ನೋಡುವುದಕ್ಕೋ ಹೋಗಿ ಬರುತ್ತಿದ್ದರು. ಸಂಶೋಧನೆಯ ನೆಪದಲ್ಲಿ ಕಾಡು ಸುತ್ತುವ ಅನೇಕ ಸಂದರ್ಭಗಳು ಪ್ರೊಫೆಸರಿಗೆ ಒದಗಿ ಬರುವುದುಂಟು. ಕರಿಮಾಯಿ ಗುಡ್ಡದ ಕಾಡಲ್ಲಿ ಹೊಸ ಎಲೆಗಳು, ಕಾಂಡಗಳು, ಕೆಲಜಾತಿಯ ಹುಳಗಳು, ಕೀಟಗಳು– ಪ್ರೊ. ಭಾಸ್ಕರರ ಸಂಶೋಧನೆಗೆ ಆಹಾರ ಆಗುತ್ತಿದ್ದವು. ಸಿಗರೇಟಿಗೇಂತ ಹೋದಾಗಲೆಲ್ಲ ದೀಪೂ ತನ್ನ ಹುಟ್ಟೂರಿನ ಸನಿಹದ ಕಾಡುಗಳ ಬಗ್ಗೆ, ಚಿಕ್ಕಂದಿನಲ್ಲಿ ತಾನು ತನ್ನ ತಂದೆಯ ಜೊತೆಗೆ ಮಲೆನಾಡಿನ ಕಾಡುಗಳನ್ನು ಬೇಟೆಯ ನೆಪದಲ್ಲಿ ಏರಿ ಹೋಗುತ್ತಿದ್ದುದರ ಬಗ್ಗೆ ಹೇಳಿಕೊಳ್ಳುತ್ತಿದ್ದ. ಆತನ ಮಾತುಗಳಲ್ಲಿ ಎಷ್ಟು ಸತ್ಯಾಂಶಗಳಿದ್ದುವೊ? ಆದರೆ ಸ್ವಾರಸ್ಯಕರವಾಗಿ ಮಾತನಾಡುತ್ತಿದ್ದ.

ಕರಿಮಾಯಿ ಗುಡ್ಡದ ದಟ್ಟ ಕಾಡುಗಳನ್ನೇರುವಾಗ ಕೋವಿ, ಕ್ಯಾಮೆರಾ ಹಾಗೂ ಇನ್ನಿತರ ವಸ್ತುಗಳನ್ನು ಹಿಡಿದುಕೊಳ್ಳಲು ಯಾರಾದರೊಬ್ಬರು ಜೊತೆಗೆ ಬೇಕಿತ್ತು. ದೀಪೂ ಯಾಕಾಗಬಾರದು? ಎಂದುಕೊಂಡರು. ಗೂಡಂಗಡಿಯಲ್ಲಿ ಅಂಥ ಕೆಲಸವೇನೂ ಇರುತ್ತಿರಲಿಲ್ಲವಾಗಿ ಪ್ರೊ. ಭಾಸ್ಕರ್ ಕರೆದೊಡನೆ ಆತ ಹೊರಟುಬಿಡುತ್ತಿದ್ದ. ದೀಪೂನ ಬಗ್ಗೆ ಪ್ರೊ. ಭಾಸ್ಕರ್‌ರಿಗೆ ಆರಂಭದಿಂದಲೇ ಒಂದು ರೀತಿಯ ಕುತೂಹಲ. ನಿಸರ್ಗದ ಮಡಿಲನ್ನು ಸೀಳಿ ಮುಂದೆ ಸಾಗುತ್ತಿದ್ದಾಗ ಅವರು ದೀಪೂನ ಬಗ್ಗೆ ವಿಚಾರಿಸುತ್ತಿದ್ದುದುಂಟು.

'ನಿನ್ನ ನಿಜವಾದ ಊರು ಯಾವುದು?'

'ನಾನು ಕೇರಳದವ ಸಾರ್.'

'ಅದು ಗೊತ್ತೋ. ಕೇರಳದಲ್ಲಿ ಎಲ್ಲೀಂತ?'

'ಕಾಸರಗೋಡು ದಾಟಿ ಮುಂದಕ್ಕೆ ಹೋದಾಗ ತಲಚೇರಿ ಅಂತ ಒಂದು ಊರು ಸಿಗುತ್ತಲ್ಲ. ಅಲ್ಲಿ ಇಳಿದು ಹೋಗಬೇಕು ಸಾರ್. ಉಳ್ಳೋಡೀಂತ.'

'ಮತ್ಯಾಕೆ ಊರುಬಿಟ್ಟು ಬಂದೆ?' ಪ್ರೊ. ಭಾಸ್ಕರ್ ಮತ್ತೆ ಪ್ರಶ್ನಿಸಿದರು.

'ವರ್ಷಗಳ ಹಿಂದೆ ಅಲ್ಲಿ ಕೋಮುಗಲಭೆಯಾಗಿತ್ತು ಸರ್. ತಂದೆ ತಾಯಿ ಇಬ್ಬರೂ ಗಲಭೆಯಲ್ಲಿ ಸತ್ತುಹೋದರು. ನಾನಿನ್ನೂ ಚಿಕ್ಕವನಿದ್ದೆ. ಹೇಗೋ ತಲಚೇರಿಗೆ ಬಂದು ರೈಲು ಹತ್ತಿದೆ. ಅಲ್ಲಿಂದ ಮಂಗಳೂರಿಗೆ ಬಂದು, ಇನ್ನೊಂದು ರೈಲು ಹತ್ತಿ ಬೆಂಗಳೂರಿಗೆ ತಲುಪಿದೆ. ಬೆಂಗಳೂರಲ್ಲಿ ಕೆಲವು ಕಾಲ ಇದ್ದೆ ಸಾರ್, ಒಂದು ಹೋಟೆಲ್ಲಲ್ಲಿ ಕ್ಲೀನರ್ ಆಗಿ. ಅಲ್ಲಿಂದ ಇಲ್ಲಿಗೆ ಬಂದಾಗ ಇಲ್ಲಿನ ಗೂಡಂಗಡಿಯವರು ಮಲೆಯಾಳಿ ಅಂತ ಗೊತ್ತಾಯ್ತು. ಅವರ ಅಂಗಡಿಯಲ್ಲಿ ಸಹಾಯಕನಾಗಿ ಸೇರಿಕೊಂಡೆ.'

'ಅಲ್ಲೇನು ಸಂಬಳ ಕೊಡ್ತಾರೆ?'

'ಸಂಬಳ ಕೊಡೋದಕ್ಕೆ ಅಲ್ಲೇನಿದೆ ಸಾರ್? ಅವರು ಊಟ ಮಾಡುವಾಗ ನನಗೂ ಊಟ